**ದಿನಾಂಕ :20–03–2021ರಂದು ಶನಿವಾರ ಬೆಳಗ್ಗೆ 11:00 ಅನ್ನಸಂದ್ರ ಪಾಳ್ಯದ, ಬಿ.ಬಿ.ಎಂ.ಪಿ ಯೋಗ ಸೆಂಟರ್‌ನಲ್ಲಿ ವಾರ್ಡ್ ಸಂಖ್ಯೆ:87ರ, ಶ್ರೀ.ವಿಜಯ ಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ.ಹೆಚ್.ಚಂದ್ರಪ್ಪ (ಸಹಾಯಕ ಅಭಿಯಂತರರು) |
| 2. | ಶ್ರೀ. ರಂಗನಾಥ, ಕಿರಿಯ ಆರೋಗ್ಯ ಪರಿವೀಕ್ಷಕರು |
| 3. | ಕೆ.ಆರ್. ಸಿ ವರಿಯರ್ಸ್ |
| 4. | ಶ್ರೀ. ಮುರುಗ |
| 5. | ನಂದಕುಮಾರ್ |
| 6. | ಕೆ. ಧನಂಜಯ |
| 7. | ಬಿ.ಸುಭಾಶ್ |
| 8. | ಸರಸ್ವತಿ |
| 9. | ರತ್ನಮ್ಮ |
| 10 | ನಿವಾಸಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿಧಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಪ್ರಪಂಚದಾದ್ಯಂತ ಕೋವಿಡ್–19 ಮಹಾಮಾರಿ ರೋಗವು ಹರುಡುತ್ತಿರುವುದನ್ನು ಸಭೆಯ ಗಮನಕ್ಕೆ ತರುತ್ತಾ ಮುಂಜಾಗ್ರತ ಕ್ರಮವಾಗಿ ಯಾವುದೇ ಕಾರಣಕ್ಕೂ ಸಾರ್ವಜನಿಕ ಪ್ರದೇಶಗಳಲ್ಲಿ ಮುಖ ಗವಸು ಇಲ್ಲದೇ ಅಂತರ ಕಾಯ್ದುಕೊಳ್ಳದೇ ಇರಬಾರದೆಂದು ಕಾಲಕಾಲಕ್ಕೆ ಸ್ಯಾನಿಟೈಸರ್ಸ್‌ಗಳನ್ನು ಉಪಯೋಗಿಸಿಕೊಂಡು ಮಹಾಮಾರಿ ರೋಗದಿಂದ ದೂರವಿರಲು ಕೋರಲಾಯಿತು ಹಾಗೂ ಸ್ಥಳೀಯ ನಿವಾಸಿ ಕ್ಷೇಮಾಬಿವೃದ್ಧಿ ಸಂಘಗಳು ಈ ದಿಸೆಯಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ಉಂಟು ಮಾಡುವಂತೆ ಕೋರಲಾಯಿತು.

ಕ್ರಮ:ಹಿರಿಯ ಆರೋಗ್ಯ ನಿರೀಕ್ಷಕರು

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಶ್ರೀ.ಧನಂಜಯ ರವರು ಮಾತನಾಡಿ ಜಗದೀಶನಗರದಲ್ಲಿ ಚರಂಡಿಗಳು ಹಾಳಾಗಿದ್ದು ಹೊಸ ಮೋರಿಯನ್ನು ಹಾಗೂ ಹಾಳಾಗಿರುವ ಸಿ ಸಿ ರಸ್ತೆಯನ್ನು ನಿರ್ಮಿಸಿಕೊಡುವಂತೆ ಸಾರ್ವಜನಿಕರು ಮಾತಾನಾಡಿರತ್ತಾರೆ.

ಕ್ರಮ:ವಾರ್ಡ್ ಅಭಿಯಂತರರು
ಹಾಗೂ ಆರೋಗ್ಯ ನಿರೀಕ್ಷಕರು

ಶ್ರೀ.ಸುಭಾಶ್‌ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಜಗದೀಶ್‌ನಗರದಲ್ಲಿ. ಕುಡಿಯುವ ನೀರಿನ ಸಮಸ್ಯೆ.ಚರಂಡಿ ಹೂಳು ಎತ್ತುವ ಬಗ್ಗೆ. ಹಾಳಾಗಿರುವ ರಸ್ತೆಗಳ ಬಗ್ಗೆ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬಾಕಿಯಿರುವ ಕಾಮಗಾರಿಗಳ ಹಾಗೂ ವಿವಿದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು ಸಾರ್ವಜನಿಕರ ಅನುಕೂಲತೆಗಾಗಿ ತುರ್ತಾಗಿ ಪೂರ್ಣಗೊಳಿಸಿಕೊಡುವಂತೆ ಕೋರಿದರು. ಈಗಾಗಲೇ ಕೆಲವು ಕಡೆ ಸಿ.ಸಿ ಕ್ಯಾಮರಗಳನ್ನು ಅಳವಡಿಸಿದ್ದು ಇನ್ನು ಕೆಲವು ಭಾಗಗಳಲ್ಲಿ ಸಿ.ಸಿ.ಕ್ಯಾಮರಗಳನ್ನು ಅಳವಡಿಸುವಂತೆ ಕೋರಿದರು.

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ತೀವ್ರವಾಗಿದ್ದು ಬೋರ್‌ವೇಲ್‌ಗಳನ್ನು ಕೊರೆಸಲು ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು

ಶ್ರೀ.ಸುಂಕಪ್ಪ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ವಿವಿದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು ಸಾರ್ವಜನಿಕರ ಅನುಕೂಲತೆಗಾಗಿ ತುರ್ತಾಗಿ ಪೂರ್ಣಗೊಳಿಸಿಕೊಡುವಂತೆ ಕೋರಿದರು. ಈಗಾಗಲೇ ಕೆಲವು ಕಡೆ ಸಿ.ಸಿ ಕ್ಯಾಮರಗಳನ್ನು ಅಳವಡಿಸಿದ್ದು ಇನ್ನು ಕೆಲವು ಭಾಗಗಳಲ್ಲಿ ಸಿ.ಸಿ.ಕ್ಯಾಮರಗಳನ್ನು ಅಳವಡಿಸುವಂತೆ ಕೋರಿದರು.

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ತಿವ್ರವಾಗಿದ್ದು ಬೋರ್‌ವೇಲ್‌ಗಳನ್ನು ಕೊರಿಸಲು ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಶ್ರೀ. ಮುರುಗ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ವಿನಾಯಕನಗರ ಮತ್ತು ರಮೇಶ್‌ನಗರದ ಕ್ರಾಸ್ ರಸ್ತೆಗಳಲ್ಲಿರುವ ಕಲ್ವರ್ಟ್‌ಗಳು ಹಾಳಾಗಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು ಈ ಕೂಡಲೇ ಹೊಸ ಕಲ್ವರ್ಟ್‌ಗಳನ್ನು ನಿರ್ಮಿಸಲು ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಶ್ರೀ.ಕೆ.ಆರ್.ಸಿ ವಾರಿಯರ್ಸ್ ಜಗಧೀಶ್‌ನಗರ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಜಗಧೀಶ್‌ನಗರ ಕ್ರಾಸ್ ರಸ್ತೆಯಲ್ಲಿ ಹೂಳನ್ನು ತೆಗೆಯುವುದು ಮತ್ತು 1ನೇ ಮುಖ್ಯರಸ್ತೆಯ ಜಿ.ಎಲ್.ಆರ್ ರಿಂದ 3ನೇ ಅಡ್ಡರಸ್ತೆ , 2ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, 5ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆ, 4ನೇ ಅಡ್ಡರಸ್ತೆ

ಮತ್ತು 5ನೇ ಮುಖ್ಯರಸ್ತೆಯಲ್ಲಿರುವ ಡಾಂಬರು ರಸ್ತೆ ನವೀಕರಣಗೋಳಿಸುವ ಬಗ್ಗೆ ಮತ್ತು6ನೇ ಮುಖ್ಯರಸ್ತೆ, 7ನೆ ಅಡ್ಡರಸ್ತೆಯಲ್ಲಿ ಒಳಚಂರಡಿ ಸಮಸ್ಯೆ ಬಗ್ಗೆ ಹಾಗೂ ಕುಡಿಯುನೀರಿನ ಬಗ್ಗೆ ಮಾತನಾಡಿರುತ್ತಾರೆ

ಕ್ರಮ:ವಾರ್ಡ್ ಅಭಿಯಂತರರು

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಶ್ರೀ.ಮತಿ ರತ್ನಮ್ಮ ಮಾತನಾಡಿ ರೆಡ್ಡಿಪಾಳ್ಯ ಕುಡಿಯುವ ನೀರಿನ ಸಮಸ್ಯೆ ಇದ್ದು ಹಾಗೂ ಪುಟ್‌ಬಾತ್ ತೆರವುಗೊಳಿಸುವ ಹಾಗೂ ಚಂರಡಿ ಹುಳು ತುಂಬಿಕೊಂಡಿದ್ದು ಸಾರ್ವಜನಿಕರು ಚಂರಂಡಿ ಹುಳನ್ನು ತೆಗೆಯುವಂತೆ ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಶ್ರೀ.ಮತಿ ಸರಸ್ವತಿ ರವರು ಮಾತನಾಡಿ ರೆಡ್ಡಿಪಾಳ್ಯ ಜಿಮ್ ರೂಂ ನವೀಕರಣಗೊಳಿಸುವ ಬಗ್ಗೆ ಹಾಗೂ ರೆಡ್ಡಿಪಾಳ್ಯ ಮುಖ್ಯರಸ್ತೆಯ ಬದಿಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು, ಅದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆ ಅಗುತ್ತಿದ್ದು ಈ ಸಮಸ್ಯೆ ಬಗೆಹರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕೋರಿದರು.

ಕ್ರಮ: ಟ್ರಾಫಿಕ್ ಪೋಲಿಸ್

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.87 ಹೆಚ್.ಎ.ಎಲ್ ಏರ್‌ಪೋರ್ಟ್

ವಾರ್ಡ್ ಸಮಿತಿ ಅಧ್ಯಕ್ಷಕರು ಹಾಗೂ
ನೋಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ಕೋಟಗಾರಿಕೆ ಅಧೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು-11.

7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
8. ಆರೋಗ್ಯ ಅಧಿಕಾರಿಗಳು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
9. ಸಹಾಯಕ ನಿರ್ದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
11. ಟ್ರಾಫೀಕ್/ಸಿವಿಲ್ ಪೋಲಿಸ್, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ಸ್, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ ಗಳು ಹೆಚ್.ಎ. ಎಲ್ ಏರ್‌ಪೋರ್ಟ್ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್.